UASB LIBRARY
Newspaper Clippings

Pg .1 Wednesday 07-04-2021 Jai Kisan



ಕೃಷಿ ವಾಣಿಜ್ಯ

skeditorkv@gmail.com



- 10,900 ಕೋಟಿ ರೂ ಅನುದಾನ
- ಕೇಂದ್ರದ ಮಹತ್ವದ ನಿರ್ಧಾರ
- ಎಂಎಸ್‌ಎಂಇ ಗಳಿಗೆ ಅನುಕೂಲ

ಆಹಾರ ಸಂಸ್ಕರಣೆಗೆ ಪಿಎಲ್‌ಐ ಬಲ

ದೇಶೀಯ ಆಹಾರ ಸಂಸ್ಕರಣಾ ಉದ್ಯಮಕ್ಕೆ ಪಿಎಲ್‌ಐ ಯೋಜನೆಯಡಿ ನೆರವು ನೀಡುವ ಕೇಂದ್ರ ಸರಕಾರದ ಕ್ರಮಕ್ಕೆ ಉದ್ಯಮಿಗಳಿಂದ ವ್ಯಾಪಕ ಸ್ವಾಗತ ವ್ಯಕ್ತವಾಗಿದೆ. ಇದು ಕೃಷಿಕ್ಷೇತ್ರವನ್ನು ಬಲಪಡಿಸುವದಲ್ಲದೇ ಭಾರತೀಯ ಆಹಾರ ಬ್ರ್ಯಾಂಡ್‌ಗಳು ವಿದೇಶಿ ಮಾರುಕಟ್ಟೆಯಲ್ಲಿ ಗಟ್ಟಿಯಾಗಿ ಬೇರೂರಲು ಅವಕಾಶ ಕಲ್ಪಿಸಿದಂತಾಗಿದೆ ಎಂದು ಉದ್ಯಮದ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರ ಸರಕಾರದ ಪಿಎಲ್‌ಐ ಯೋಜನೆಯಡಿ ಈಗ ಆಹಾರ ಸಂಸ್ಕರಣಾ ಉದ್ಯಮವೂ ಸೇರ್ಪಡೆಯಾಗಿದೆ. ಇತ್ತೀಚೆಗೆ ಕೇಂದ್ರ ಸಚಿವ ಸಂಪುಟ ಪಿಎಲ್‌ಐ ಯೋಜನೆಯಡಿ 10,900 ಕೋಟಿ ರೂ.ಅನುದಾನ ಬಿಡುಗಡೆಗೆ ಅಸ್ತು ಎಂದಿದೆ.

ಜಾಗತಿಕ ಮಟ್ಟಕ್ಕೆ ಹೋಲಿಸಿದರೆ ಭಾರತದಲ್ಲಿ ಆಹಾರ ಸಂಸ್ಕರಣಾ ಉದ್ಯಮ ದೊಡ್ಡ ಮಟ್ಟದಲ್ಲಿ ಪ್ರಗತಿ ಸಾಧಿಸಿಲ್ಲ. 1991ರಿಂದ ದೇಶ ಆರ್ಥಿಕ ಉದಾರೀಕರಣಕ್ಕೆ ತೆರೆದುಕೊಂಡ ನಂತರ ಹಲವಾರು ಬಹುರಾಷ್ಟ್ರೀಯ ಕಂಪನಿಗಳು ಭಾರತದ ಮಾರುಕಟ್ಟೆಗೆ ಪಾದಾರ್ಪಣೆ ಮಾಡಿದವು. ಅವುಗಳ ಉತ್ಪನ್ನಗಳಿಗೆ ಸಮರ್ಥವಾಗಿ ಪೈಪೋಟಿ ನೀಡಲು ದೇಶೀಯ ಬ್ರ್ಯಾಂಡ್‌ಗಳಿಗೆ ಇದುವರೆಗೂ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ದೇಶೀಯ ಆಹಾರ ಸಂಸ್ಕರಣಾ ಉದ್ಯಮವನ್ನು ಬಲಪಡಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಆಹಾರ ಉತ್ಪನ್ನಗಳನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಉತ್ತಾದನಾ ಸಂಯೋಜಿತ ಪ್ರೋತ್ಸಾಹಕ(ಪಿಎಲ್‌ಐ) ಯೋಜನೆಯಡಿ ಅನುದಾನ ಒದಗಿಸಲು ಕೇಂದ್ರ ಸರಕಾರ ಕ್ರಮ ಕೈಗೊಂಡಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆರು ವರ್ಷಕ್ಕೂ ಅಧಿಕ ಸಮಯವನ್ನು ತೆಗೆದುಕೊಳ್ಳಲಾಗುತ್ತದೆ. 33,494 ಕೋಟಿ ರೂ ಮೌಲ್ಯದ ಸಂಸ್ಕರಿತ ಆಹಾರ ಉತ್ಪನ್ನಗಳನ್ನು ತಯಾರಿಸುವ ಉತ್ತಾದನಾ ಸಾಮರ್ಥ್ಯವನ್ನು ಹೊಂದುವ ನಿರೀಕ್ಷೆ ವ್ಯಕ್ತಪಡಿಸಲಾಗಿದೆ. ಸಂಸ್ಕರಿತಸಾಮಯವಆಹಾರಉತ್ಪನ್ನಗಳನ್ನು ತಯಾರಿಸುವ ಸಣ್ಣ, ಆತಿ ಸಣ್ಣ ಹಾಗೂ ಮಧ್ಯಮ ದರ್ಜೆ ಉದ್ಯಮಗಳಿಗೂ(ಎಂಎಸ್‌ಎಂಇ) ನೆರವು ನೀಡಲಾಗುತ್ತದೆ. ಇದು ಸಮರ್ಪಕವಾಗಿ ಅನುಷ್ಠಾನಗೊಂಡರೆ ಸುಮಾರು 2.5 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಹಣ್ಣು, ತರಕಾರಿ, ಆಹಾರ ಧಾನ್ಯ ಬೆಳೆಗಳಿಗೆ ಉತ್ತಮ ದರ ಲಭಿಸಲಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ದೇಶೀಯ ಬ್ರ್ಯಾಂಡ್‌ಗಳು ಜನಪ್ರಿಯಗೊಳ್ಳಲು ಅನುಕೂಲವಾಗುತ್ತದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಆಹಾರ ಸಂಸ್ಕರಣಾ ಉದ್ಯಮಕ್ಕೆ ಪಿಎಲ್‌ಐ ಯೋಜನೆಯ ನೆರವು ಸಮರ್ಪಕವಾಗಿ ಅನುಷ್ಠಾನಗೊಂಡರೆ ಸುಮಾರು 2.5 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಹಣ್ಣು, ತರಕಾರಿ, ಆಹಾರ ಧಾನ್ಯ ಬೆಳೆಗಳಿಗೆ ಉತ್ತಮ ದರ ಲಭಿಸಲಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ದೇಶೀಯ ಬ್ರ್ಯಾಂಡ್‌ಗಳು ಜನಪ್ರಿಯಗೊಳ್ಳಲು ಅನುಕೂಲವಾಗುತ್ತದೆ

■ ಪಿಯೂಷ್ ಗೋಯಲ್ | ಕೇಂದ್ರ ಸಚಿವ

ಎಷ್ಟರಮಟ್ಟಿಗೆ ಸಫಲ...?

ಮುಖ್ಯವಾಗಿ ಕೇಂದ್ರ ಸರಕಾರದ ಈ ಕ್ರಮದಿಂದ ದೇಶೀಯ ಕೃಷಿ ರಂಗಕ್ಕೆ ಭರ್ಜರಿ ಅನುಕೂಲವಾಗಲಿದೆ ಎಂದು ವ್ಯಾಖ್ಯಾನಿಸಲಾಗಿದೆ. ಆಹಾರ ಸಂಸ್ಕರಣಾ ವಲಯದ ಕಂಪನಿಗಳು ರೈತರು ಬೆಳೆದ ಹಣ್ಣು, ತರಕಾರಿ, ಆಹಾರಧಾನ್ಯಗಳನ್ನು ಯೋಗ್ಯ ಬೆಲೆಗೆ ಖರೀದಿಸಲಿದ್ದು, ಇದರಿಂದ ರೈತರಿಗೆ ಭರ್ಜರಿ ಲಾಭವಿದೆ ಎಂದು ಹೇಳಲಾಗಿದೆ. ಆದರೆ ಇಲ್ಲಿ ಇನ್ನೊಂದು ವಾದವೂ ಇದೆ. ರೈತರಿಂದ ಕೃಷಿಉತ್ಪನ್ನಗಳನ್ನು ಖರೀದಿಸುವ ಕಂಪನಿಗಳು ಆದನ್ನು ಸಂಸ್ಕರಿಸಿ ಗ್ರಾಹಕರಿಗೆ ದುಪ್ಪಟ್ಟು ಬೆಲೆಗೆ ಮಾರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇನ್ನು ರೈತರಿಗೆ ಸದಾ ಕಾಲವೂ ಯೋಗ್ಯ ಬೆಲೆಯ ಖಾತ್ರಿ, ದೊರೆಯುತ್ತದೆಯೇ ಎಂಬ ಪ್ರಶ್ನೆಯನ್ನೂ ಇಲ್ಲಿ ಕೇಳಬೇಕಿದೆ. ಏಕೆಂದರೆ ಕಂಪನಿಗಳು ಗುಣಮಟ್ಟಕ್ಕೆ ಮಾತ್ರ ಮಹತ್ವ ನೀಡುವದರಿಂದ ಗ್ರೇಡಿಂಗ್ ನೆಪದಲ್ಲಿ ರೈತರ ಉತ್ಪನ್ನಗಳನ್ನು ತಿರಸ್ಕರಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹೀಗಾಗಿ ಸಚಿವ ಗೋಯಲ್ ವಿಶ್ವಾಸ ಎಷ್ಟರಮಟ್ಟಿಗೆ ಸಫಲವಾಗುತ್ತದೆ ಎಂದು ಕಾದು ನೋಡಬೇಕಿದೆ.





ಸಹಾಯಧನ ಸೌಲಭ್ಯ

ಈ ಯೋಜನೆಯಡಿ ಸಹಾಯಧನ ಪಡೆಯಲು ಆರ್ಜಿ ಸಲ್ಲಿಸಬಯಸುವ ಉದ್ಯಮಿಗಳು ನಿಗದಿತ ಪ್ರಮಾಣದ ಹೂಡಿಕೆ ಹಾಗೂ ಮಾರಾಟ ಪ್ರಮಾಣವನ್ನು ಸಾಧಿಸಬೇಕಾಗುತ್ತದೆ. ಉತ್ಪನ್ನಗಳ ಮಾರಾಟ ಎಷ್ಟು ಮೊತ್ತದಷ್ಟು ಹೆಚ್ಚಾಗಿದೆಯೋ ಆ ಮೊತ್ತದ ಒಂದು ಪರ್ಸಂಟೇಜ್‌ನ್ನು ಸಬ್ಸಿಡಿಯಾಗಿ ನೀಡಲಾಗುತ್ತದೆ. ಆದರೆ ಈ ನಿಯಮವು ಸಾವಯವ ಸಂಸ್ಕರಿತ ಆಹಾರ ಉತ್ಪನ್ನಗಳನ್ನು ತಯಾರಿಸುವ ಎಂಎಸ್‌ಎಂಇಗಳಿಗೆ ಅನ್ವಯಿಸುವದಿಲ್ಲ. ರೆಡಿ ಟು ಕುಕ್, ರೆಡಿ ಟು ಈಟ್, ಹಣ್ಣು ಮತ್ತು ತರಕಾರಿ ಸಂಸ್ಕರಣೆ, ಸಮುದ್ರಜನ್ಯ ಆಹಾರ ಉತ್ಪನ್ನಗಳು ಹಾಗೂ ಬೆಣ್ಣೆ ಉತ್ಪನ್ನಗಳನ್ನು ತಯಾರಿಸುವ ಕಂಪನಿಗಳು ಈ ಯೋಜನೆಯಿಂದ ಪ್ರಯೋಜನ ಪಡೆಯಲಿವೆ ಎಂದು ಹೇಳಲಾಗಿದೆ.

ದೇಶೀಯ ಆಹಾರ ಸಂಸ್ಕರಣೆ ಉದ್ಯಮದ ತಾಕತ್ತು ಕಡಿಮೆ ಏನಿಲ್ಲ. ಒಟ್ಟು ದೇಶೀಯ ಆಹಾರ ಮಾರುಕಟ್ಟೆಯಲ್ಲಿ ಆಹಾರ ಸಂಸ್ಕರಣಾ ಉದ್ಯಮದ ಪಾಲು ಕೇ.32ರಷ್ಟಿದೆ. ದೇಶದ ಆಹಾರ ಸಂಸ್ಕರಣೆ ಮಾರುಕಟ್ಟೆ ಗಾತ್ರ 25,691.30 ಶತಕೋಟಿ ರೂದಷ್ಟಿದೆ. 2024ರ ವೇಳೆಗೆ 53,435.52 ಶತಕೋಟಿ ರೂಗೆ ತಲುಪಲಿದೆ ಎಂದು ಹೇಳಲಾಗಿದೆ. ಏಪ್ರಿಲ್ 2000-ಮಾರ್ಚ್ 2017ರ ಅವಧಿಯಲ್ಲಿ ದೇಶೀಯ ಆಹಾರ ಸಂಸ್ಕರಣೆ ಉದ್ಯಮಕ್ಕೆ ಸುಮಾರು 7.54 ಶತಕೋಟಿ ಡಾಲರ್ ವಿದೇಶಿ ನೇರ ಬಂಡವಾಳ ಹರಿದುಬಂದಿದೆ. ಮುಂದಿನ 10 ವರ್ಷಗಳಲ್ಲಿ 33 ಶತಕೋಟಿ ಡಾಲರ್ ಪ್ರಮಾಣದ ಬಂಡವಾಳ ಆಕರ್ಷಿಸಲಿದೆ ಎಂದು ಸಿಐಐ(ಭಾರತೀಯ ಉದ್ಯಮ ಮಹಾಮಂಡಳ) ಅಂದಾಜಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಇರುವ ಸಾವಯವ ಆಹಾರ ಉತ್ಪನ್ನಗಳ ಪ್ರಮಾಣದಲ್ಲಿ ಭಾರತದ ಪಾಲು ಕೇ.1ಕ್ಕಿಂತಲೂ ಕಡಿಮೆ ಇದೆ. ಸದ್ಯಕ್ಕೆ ದೇಶೀಯ ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು 700 ದಶಲಕ್ಷ ಡಾಲರ್‌ದಷ್ಟಿದೆ. ಈಗ ಪಿಎಲ್‌ಐ ವ್ಯಾಪ್ತಿಯಲ್ಲಿ ಆಹಾರ ಸಂಸ್ಕರಣಾ ಉದ್ಯಮವು ಸೇರ್ಪಡೆಯಾಗಿರುವದರಿಂದ ದೇಶೀಯ ಮಟ್ಟದಲ್ಲಿ ಉತ್ತಾದನಾ ಚಟುವಟಿಕೆ ಹೆಚ್ಚಲು ಹಾಗೂ ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ವೃದ್ಧಿಯಾಗಲು ಅವಕಾಶ ಕಲ್ಪಿಸಿದಂತಾಗಿದೆ. ಜೊತೆಗೆ ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಹಲವಾರು ಸ್ಟಾರ್ಟ್‌ಅಪ್‌ಗಳು ಹುಟ್ಟಿಕೊಳ್ಳಲು ಹಾಗೂ ಬಳಕೆದಾರರು ಯುವ ಉದ್ಯಮಿಗಳು ಈ ಕ್ಷೇತ್ರಕ್ಕೆ ಬರಲು ಅನುಕೂಲವಾಗಲಿದೆ ಎಂದು ದೇಶೀಯ ಆಹಾರ ಸಂಸ್ಕರಣಾ ಉದ್ಯಮದ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.



ಹಣ್ಣು ತರಕಾರಿ ಈ ಬಾರಿ ಭರಪೂರ



2020-21ನೇ ಸಾಲಿನಲ್ಲಿ ಬಿಳಾಚೆ ಹಾಗೂ ಉಳ್ಳಾಗಡ್ಡಿ ಉತ್ಪಾದನೆ ದಾಖಲೆ ಪ್ರಮಾಣದಲ್ಲಿರುವ ಹಿನ್ನೆಲೆಯಲ್ಲಿ ಈ ಬಾರಿ ಕೃಷಿಸಚಿವಾಲಯವು ಅಂದಾಜಿಸಿದೆ.

ಬಿಳಾಚೆಯಉತ್ಪಾದನೆ 53.11 ದಶಲಕ್ಷ ಟನ್‌ದಷ್ಟಾಗುವದೆಂದು ಅಂದಾಜಿಸಲಾಗಿದ್ದು, 2019-20ರಲ್ಲಿದ್ದ 26.09 ದಶಲಕ್ಷ ಟನ್‌ಗಿಂತ ಹೆಚ್ಚಳವಾಗಲಿದೆ. 22.47 ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ ಬಿಳಾಚೆ ಬೆಳೆಯನ್ನೆಯಾಗಿದ್ದು, ಈವರ್ಷ ದಲ್ಲಿದ್ದ 20.51 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಾಗಿರುವದೇ ಉತ್ಪಾದನೆ ಜಾಸ್ತಿಯಾಗಲು ಕಾರಣ ಎಂದು ಹೇಳಲಾಗಿದೆ. ಇದೇ ರೀತಿಯಲ್ಲಿ ಉಳ್ಳಾಗಡ್ಡಿ ಬೆಳೆಕ್ಷೇತ್ರವೂ ವಿಸ್ತಾರಗೊಂಡಿದ್ದು ಬಲ್ಲ ಮೂಲಗಳು ಉಳ್ಳಾಗಡ್ಡಿಯ ಉತ್ಪಾದನೆ ಹೆಚ್ಚಾಗುವದೆಂದು ಹೇಳಲಾಗಿದೆ. ಪ್ರಮುಖ ಉತ್ಪಾದನಾ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್ ಹಾಗೂ ಕರ್ನಾಟಕಗಳಲ್ಲಿ ಅತಿವೃಷ್ಟಿ, ಅನಾವೃಷ್ಟಿಯ ಪರಿಣಾಮವಾಗಿ ಕೊಚ ಬೆಳೆ ಹಾನಿ ಉಂಟಾಗಿದ್ದರೂ, ಒಟ್ಟಾರೆ ಉತ್ಪಾದನೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ಆದರೆ ಟೊಮೆಟೋ ಉತ್ಪಾದನೆ ಕಳೆದ ವರ್ಷದಲ್ಲಿದ್ದ 21.17 ದಶಲಕ್ಷ ಟನ್‌ಗೆ ಹೋಲಿಸಿದರೆ 20.14 ಟನ್‌ದಷ್ಟು ಕಡಿಮೆಯಾಗುವದೆಂದು ಅಂದಾಜಿಸಲಾಗಿದೆ. ಟೊಮೆಟೋ ಬೆಳೆ ಕ್ಷೇತ್ರದ ವಿಸ್ತೀರ್ಣದಲ್ಲಿ ಹೆಚ್ಚಳವಾಗಿದ್ದರೂ ಪ್ರಮುಖ ಉತ್ಪಾದನಾ ಕೇಂದ್ರವಾದ ಕರ್ನಾಟಕ ರಾಜ್ಯದಲ್ಲಿ ಆಕಾಲಿಕ ಮಳೆಯಿಂದಾಗಿ ಬೆಳೆ ಹಾನಿಯಾಗಿರುವುದೇ ಇದಕ್ಕೆ ಕಾರಣವಾಗಿದೆ.



ತೋಟಗಾರಿಕೆ ಬೆಳೆಗಳು

ಪ್ರಮುಖ ಹಣ್ಣು ಮತ್ತು ತರಕಾರಿಗಳ ಉತ್ಪಾದನೆ ಹೆಚ್ಚಳ ಸಂಭವನೀಯತೆ ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆ ಉತ್ಪಾದನೆ 326.58 ದಶಲಕ್ಷ ಟನ್‌ದಷ್ಟಾಗುವದೆಂದು ಕೃಷಿ ಸಚಿವಾಲಯದ ಪ್ರಾಥಮಿಕ ಅಂದಾಜು ವದರಿಯು ತಿಳಿಸಿದೆ. 2019-20ರಲ್ಲಿ ಒಟ್ಟು ಉತ್ಪಾದನೆ 320.76 ದಶಲಕ್ಷ ಟನ್‌ದಷ್ಟಾಗಿತ್ತು. ಈ ಬಾರಿ ಸುಮಾರು ಕೇ.2ರಷ್ಟು ವೃದ್ಧಿಯಾಗಲಿದೆ. ಆದರೆ ಹೂವು ಮತ್ತು ಸಾಂಬಾರ ಪದಾರ್ಥಗಳ ಉತ್ಪಾದನೆ ಕಡಿಮೆಯಾಗುವದೆಂದು ಅಂದಾಜಿಸಲಾಗಿದೆ.

ಹಣ್ಣುಗಳ ಉತ್ಪಾದನೆ 103.23 ದಶಲಕ್ಷ ಟನ್‌ದಷ್ಟಾಗಲಿದೆ. 2019-20ರಲ್ಲಿ ಇದು 102.03 ದಶಲಕ್ಷ ಟನ್‌ದಷ್ಟಾಗಿತ್ತು. ಬಾಳೆ ಹಣ್ಣು ಉತ್ಪಾದನೆ 33.73 ದಶಲಕ್ಷ ಟನ್‌ದಷ್ಟಾಗಲಿದೆ. ಹಿಂದಿನ ವರ್ಷ ಇದು 32.59 ದಶಲಕ್ಷ ಟನ್‌ದಷ್ಟಿತ್ತು. ಮಾವಿನಹಣ್ಣು ಉತ್ಪಾದನೆ 21.12 ದಶಲಕ್ಷ ಟನ್‌ದಷ್ಟಾಗಲಿದೆ. ಹಿಂದಿನ ವರ್ಷ ಇದು 20.26 ದಶಲಕ್ಷ ಟನ್‌ದಷ್ಟಿತ್ತು.

ಸಾಂಬಾರ ಪದಾರ್ಥಗಳು

ಸಾಂಬಾರ ಪದಾರ್ಥಗಳ ಒಟ್ಟು ಉತ್ಪಾದನೆ 10.24 ದಶಲಕ್ಷ ಟನ್‌ದಷ್ಟಾಗಲಿದೆ. ಕಳೆದ ವರ್ಷದಲ್ಲಿದ್ದ 10.29 ದಶಲಕ್ಷ ಟನ್‌ಗೆ ಹೋಲಿಸಿದರೆ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಕೆಲ ಭಾಗಗಳಲ್ಲಿ ಅತಿವೃಷ್ಟಿಯಿಂದಾಗಿ ಒಣ ಮೆಣಸಿನಕಾಯಿ ಬೆಳೆ ಹಾನಿಯಾಗಿದ್ದು, ಈ ಬಾರಿ ಉತ್ಪಾದನೆ 1.91 ದಶಲಕ್ಷ ಟನ್‌ದಷ್ಟಾಗಲಿದೆ. ಹಿಂದಿನ ವರ್ಷದಲ್ಲಿದ್ದ 1.93 ದಶಲಕ್ಷ ಟನ್‌ಗಿಂತ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಲಿದೆ ಎಂದು ಹೇಳಲಾಗಿದೆ. ಜೀರಿಗೆ ಉತ್ಪಾದನೆ 8.8 ಲಕ್ಷ ಟನ್‌ದಷ್ಟಾಗಲಿದೆ. ಕಳೆದ ವರ್ಷದಲ್ಲಿದ್ದ 9.12 ಲಕ್ಷ ಟನ್‌ಗಿಂತ ಕಡಿಮೆಯಾಗುವದೆಂದು ಹೇಳಲಾಗಿದೆ.



For more information visit
University Library Website
Web - uasbagrilibindia.org
E-mail- librarian@uasbangalore.edu.in

"A Beautiful life Begins with a Beautiful Minset"

UASB LIBRARY
Newspaper Clippings
Pg .2 Wednesday 07-04-2021 Jai Kisan



30 ಲಕ್ಷ ರೈತರಿಗೆ ಸಾಲಭಾಗ್ಯ

ಕೃಷಿಕರಿಗೆ ಆರ್ಥಿಕ ಸಂಕಷ್ಟ ತಟ್ಟದಂತೆ ಕ್ರಮ

• ಎಸ್. ಲಕ್ಷ್ಮಿನಾರಾಯಣ

ಬೆಂಗಳೂರು: ರೈತಾಪಿ ಸಮುದಾಯಕ್ಕೆ ಕೊರೊನಾ ಆರ್ಥಿಕ ಸಂಕಷ್ಟ ತಟ್ಟದಂತೆ ನೋಡಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿದ್ದು, ಪ್ರಸಕ್ತ ವರ್ಷ 30 ಲಕ್ಷ ರೈತರಿಗೆ 20 ಸಾವಿರ ಕೋಟಿ ರೂ. ಬೆಳೆ ಸಾಲ ವಿತರಿಸಲು ಸಜ್ಜಾಗಿದೆ.



ಕೃಷಿ ಸಾಲಕ್ಕಾಗಿ ನಬಾರ್ಡ್‌ನಿಂದ ದೊರೆಯುವ ಮರು ಹಣಕಾಸು ನೆರವು ಪ್ರಮಾಣ ಈಗಿರುವ ಶೇ.35ರಿಂದ ಶೇ.50ಕ್ಕೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರದ ಮೊರೆ ಹೋಗಲು ರಾಜ್ಯ ತೀರ್ಮಾನಿಸಿದೆ.

ಕೊರೊನಾ ಆರ್ಥಿಕ ಸಂಕಷ್ಟ ಹಿನ್ನೆಲೆಯಲ್ಲಿ ರೈತರಲ್ಲಿ ಬೆಳೆ ಸಾಲ ವಿಷಯದಲ್ಲಿ ಆತಂಕ ಮೂಡದಂತೆ ನೋಡಿಕೊಳ್ಳಲು ಡಿಸಿಸಿ ಬ್ಯಾಂಕ್‌ಗಳ ಅಧ್ಯಕ್ಷರುಗಳ ಸಭೆಯಲ್ಲೂ ನಿರ್ಧರಿಸಲಾಗಿದೆ ಎಂದು ಹೇಳಲಾಗಿದೆ.

ಹಿಂದಿನ ವರ್ಷಗಳ ಮಾಸಿಕವಾರು ಬೆಳೆ ಸಾಲ ಬೇಡಿಕೆಯ ಮಾಹಿತಿ ಆಧಾರದ ಮೇಲೆ ಯಾವ್ಯಾವ ತಿಂಗಳಿಗೆ ಎಷ್ಟೆಷ್ಟು ಸಾಲದ ಅವಶ್ಯಕತೆ ಬೀಳಬಹುದು ಎಂಬ ಲೆಕ್ಕಾಚಾರ ಮಾಡಿ ಪಟ್ಟಿ ಸಿದ್ಧಪಡಿಸಲಾಗಿದೆ. ಡಿಸಿಸಿ ಬ್ಯಾಂಕ್, ಆಪೆಕ್ಸ್ ಬ್ಯಾಂಕ್‌ನಿಂದ ಸಾಲ ಮನ್ನಾ ಕುರಿತು ಬರುವ ಕ್ಲೈಮ್‌ಗಳಿಗೆ ತಕ್ಷಣ ಹಣಕಾಸು ಬಿಡುಗಡೆಗೂ ಆರ್ಥಿಕ ಇಲಾಖೆಗೆ ನಿರ್ದೇಶನ ನೀಡಲು ಸಿಎಂಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಹೇಳಲಾಗಿದೆ.

7ನೇ ಪುಟಕ್ಕೆ

> ಬೆಳೆ ಸಾಲ ವಿತರಣೆಗೆ ತೊಂದರೆ ಇಲ್ಲದಂತೆ ನೋಡಿಕೊಳ್ಳಲಾಗುವುದು. ಈ ವರ್ಷ 20 ಸಾವಿರ ಕೋಟಿ ರೂ.ವರೆಗೂ ಸಾಲ ವಿತರಿಸುವ ಗುರಿ ಹೊಂದಿದ್ದೇವೆ.
>
> • ಎಸ್.ಟಿ.ಸೋಮಶೇಖರ್, ಸಹಕಾರ ಸಚಿವ



07-04-2021 Uv Pg 01

30 ಲಕ್ಷ ರೈತರಿಗೆ ಸಾಲಭಾಗ್ಯ

1ನೇ ಪುಟದಿಂದ **3 ಲಕ್ಷ ಹೊಸ ರೈತರಿಗೆ ಸಾಲ:** ಈ ಮಧ್ಯೆ, ಬೆಳೆ ಸಾಲ ವಿತರಣೆಯಲ್ಲಿ ಸಹಕಾರ ಇಲಾಖೆಯು 2020-21 ನೇ ಸಾಲಿನಲ್ಲಿ ನಿಗದಿತ ಗುರಿಗಿಂತ 1.31 ಲಕ್ಷ ರೈತರಿಗೆ 1,960 ಕೋಟಿ ರೂ.ಸಾಲ ವಿತರಿಸಿದೆ. 24.36 ಲಕ್ಷ ರೈತರಿಗೆ 15,300 ಕೋಟಿ ರೂ. ಸಾಲ ನೀಡುವ ಗುರಿ ಇತ್ತಾದರೂ 25.67 ಲಕ್ಷ ರೈತರಿಗೆ 17,260 ಕೋಟಿ ರೂ. ಸಾಲ ನೀಡಿದೆ. 2021-22 ಸಾಲಿನಲ್ಲಿ 30 ಲಕ್ಷ ರೈತರಿಗೆ 20 ಸಾವಿರ ಕೋಟಿ ರೂ. ಸಾಲ ನೀಡುವ ಗುರಿ ಹಾಕಿಕೊಂಡಿದ್ದು, ನವೀಕರಣ ಜತೆಗೆ ಹೊಸದಾಗಿ 3 ಲಕ್ಷ ಹೆಚ್ಚುವರಿ ರೈತರಿಗೂ ಸಾಲ ನೀಡುವ ಉದ್ದೇಶವಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ. ಈ ಹಿಂದೆ ಘೋಷಿಸಲಾಗಿದ್ದ ಬೆಳೆ ಸಾಲ ಮನ್ನಾದಡಿ ತಾಂತ್ರಿಕ ಕಾರಣಗಳಿಗಾಗಿ ತಡೆಹಿಡಿದಿದ್ದ ಸುಮಾರು 1 ಲಕ್ಷ ರೈತರ ಸಾಲ ಮನ್ನಾ ಚುಕ್ತಾ ಸಹ ಮಾಡಲಾಗಿದೆ.

ಕೃಷಿ ಸಾಲಕ್ಕೆ ನಬಾರ್ಡ್‌ನಿಂದ ನೀಡುವ ಮರು ಹೊಂದಾಣಿಕೆ ಸಾಲದ ಪ್ರಮಾಣವನ್ನು ಶೇ.50 ರವರೆಗೂ ಹೆಚ್ಚಿಸಲು ಕೇಂದ್ರ ಕೃಷಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ.ವರೆಗೆ ಬೆಳೆ ಸಾಲ, ಶೇ.3ರ ಬಡ್ಡಿ ದರದಲ್ಲಿ 10 ಲಕ್ಷ ರೂ.ವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ನೀಡಲಾಗುತ್ತಿದೆ. ಕಳೆದ ವರ್ಷ ಗ್ರಾಮೀಣ ಭಾಗದಲ್ಲಿ ಸಹಕಾರ ಇಲಾಖೆ ದೊರಕಿಸಿಕೊಟ್ಟ ಬೆಳೆಸಾಲದಿಂದ ರೈತರು ಆರ್ಥಿಕ ಸಂಕಷ್ಟದಿಂದ ಪಾರಾಗಿದ್ದರು.

ದುಪ್ಪಟ್ಟು ಬೆಳೆ ಸಾಲ ವಿತರಣೆ: ಆರ್ಥಿಕ ಸಂಕಷ್ಟದ ನಡುವೆಯೂ ಪ್ರಸಕ್ತ ವರ್ಷ ಬೆಳೆ ಸಾಲ ವಿತರಣೆಗೆ ಯಾವುದೇ ತೊಂದರೆ ಇಲ್ಲದಂತೆ ನೋಡಿಕೊಳ್ಳಲಾಗುವುದು. ಡಿಸಿಸಿ ಬ್ಯಾಂಕ್ ಹಾಗೂ ಆಪೆಕ್ಸ್ ಬ್ಯಾಂಕ್ ಜತೆ ನಿತ್ಯ ಸಮನ್ವಯ ಸಾಧಿಸಿದ್ದರಿಂದ ಕಳೆದ ವರ್ಷ ನಿಗದಿತ ಗುರಿಗಿಂತ ಹೆಚ್ಚಿನ ಸಾಧನೆ ಮಾಡಲಾಗಿದ್ದು, ಈ ವರ್ಷ ಆ ಪ್ರಮಾಣ ದುಪ್ಪಟ್ಟು ಮಾಡಲಾಗುವುದು. 20 ಸಾವಿರ ಕೋಟಿ ರೂ.ವರೆಗೂ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಘೋಷಿಸಿದ ಆತ್ಮನಿರ್ಭರ ಯೋಜನೆ ಅನುಷ್ಠಾನದಲ್ಲೂ ಕರ್ನಾಟಕ ದೇಶದಲ್ಲೇ ಮುಂದಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

Spices Board inks deal with UNDP to develop blockchain-powered traceability interface

Project to be piloted with over 3,000 farmers

SPECIAL CORRESPONDENT
MYSURU

The Spices Board India has inked a memorandum of understanding with UNDP India's Accelerator Lab to build a blockchain-based traceability interface for Indian spices to enhance transparency in supply chain and trade.

Blockchain is a decentralised process of recording transactions on an open and shared electronic ledger.

"This allows for ease and transparency in data management across a complex network, including farmers, brokers, distributors, processors, retailers, regulators, and consumers, thus simplifying the supply chain. It will allow farmers just as all other members of the supply chain to access the information, which further makes the entire supply chain more efficient and equitable," according to a statement released by Spices Board India from New Delhi.



The Spices Board is aiming to strengthen the supply chain so as to position India as the premier destination for clean and safe spices. ▪ M.A. SRIRAM

The UNDP and Spices Board India are working towards integrating the blockchain traceability interface with the e-spice Bazaar portal developed by the board for connecting spice farmers with markets.

Design of blockchain interface is expected to be completed by May 2021. The project will be piloted with more than 3,000 farmers engaged in chilli and turmeric farming in select districts of Andhra Pradesh, the press statement said.

"India is the largest exporter, producer and consumer of spices in the world. India's spices export crossed a milestone of 3 billion USD during 2019-20 and our estimates indicate that we would cross that milestone and achieve a new high during 2020-21," the statement quoting Secretary of Spices Board India D. Sathiyan said.

The changing order in the global spices and food sector has increased the relevance of infrastructure development for value addition, certification for quality and food safety, implementation of traceability systems etc. and the board has been working to provide support to the stakeholders of the sector and to strengthen the supply chain so as to position India as the premier destination for clean and safe spices, the statement added.

07-04-2021 Hindu Pg 05